**ದಿನಾಂಕಃ06.02.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿಯರ ಪರ ಶ್ರೀ ಹೆಚ್ ಟಿ ವಕೀಲರಿಂದಃ-

ನನ್ನ ತಂದೆಗೆ 5 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಹೆಣ್ಣುಮಕ್ಕಳ ಹೆಸರು ಸಾವಿತ್ರಮ್ಮ ಮತ್ತು ಶಾರದಮ್ಮ. ಇಬ್ಬರು ಜೀವಂತವಿದ್ದಾರೆ, ನನ್ನ ಸಹೋದರರು ಜೀವಂತವಿದ್ದಾರೆ. ನನ್ನ ತಂದೆಯ ಹೆಸರು ಹನುಮಣ್ಣ, ನನ್ನ ತಂದೆಯವರನ್ನು ಊರಿನವರು ಚಿಕ್ಕಹನುಮಣ್ಣ ಎಂದು ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ನನ್ನ ತಂದೆ 1989 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟಾಗ ಅವರಿಗೆ ಸು.90 ವರ್ಷವಾಗಿದ್ದಿರಬಹುದು. ನನ್ನ ತಂದೆ ಮೃತಪಟ್ಟಾಗ ನನಗೆ ಸು.26 ವರ್ಷ ವಯಸ್ಸಾಗಿತ್ತು. ನನಗೆ ನಮ್ಮ ಜಮೀನಿನ ದಾಖಲೆಗಳ ಬಗ್ಗೆ ಮಾಹಿತಿ ಇದೆ. ದಾವಾ ಆಸ್ತಿ ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಅಂದಾಜು 35 ಎಕರೆ ಜಮೀನು ಇರಬಹುದು. ಸದರಿ 35 ಎಕರೆ ಜಮೀನಿನಲ್ಲಿ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳೆರಡು ಹಾಗೂ ನನ್ನ ತಾಯಿಗೆ ಸೇರಿದ ಆಸ್ತಿಗಳು ಇವೆ. ನಮ್ಮ ಕುಟುಂಬದಲ್ಲಿ ಕೆಲವೊಂದು ಆಸ್ತಿಗಳ ವಿಭಾಗವಾಗಿದೆ ಕೆಲವೊಂದು ಆಸ್ತಿಗಳ ವಿಭಾಗ ಆಗಿರುವುದಿಲ್ಲ. ವಿಭಾಗವಾಗಿರುವ ಆಸ್ತಿಗಳ ಖಾತೆಯು ಅವರವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಕೆಲವೊಂದು ಖಾತೆ ಬಂದಿರುತ್ತದೆ ಕೆಲವೊಂದು ಆಸ್ತಿಗಳ ಖಾತೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಮಾಡಿಕೊಂಡಿರುವ ವಿಭಾಗದಲ್ಲಿ ಬೀರೂರು ಹೋಬಳಿಯ ಸರ್ವೆ ನಂ.4/7 ರ 5 ಎಕರೆ ಹಾಗೂ ದಾವಾ ಆಸ್ತಿಯನ್ನು ಸೇರಿಸಿರುವುದಿಲ್ಲ. ನನ್ನ ತಂದೆಯ ಜೀವಂತ ಕಾಲದಲ್ಲಿ ಅವರ ಹೆಸರಿನಲ್ಲಿ ಖಾತೆ ಇತ್ತು. ನನ್ನ ತಂದೆಯ ಹೆಸರಿಗೆ ಬಂದಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ತಾಯಿಯ ಹೆಸರಿಗೆ ಬಂದಿರುವ ಆಸ್ತಿಯನ್ನು ನನ್ನ ತಂದೆಯವರು ಖರೀದಿ ಮಾಡಿ ತಾಯಿ ಯ ಹೆಸರಿಗೆ ಖಾತೆ ಮಾಡಿಸಿರುತ್ತಾರೆ. ನನ್ನ ತಾಯಿಯ ಹೆಸರಿನಲ್ಲಿರುವ ಮೇಲೆ ಹೇಳಿದ 5 ಎಕರೆ ಜಮೀನನ್ನು ಜನತಾ ನ್ಯಾಯಾಲಯದಲ್ಲಿ ರಾಜೀ ಮಾಡಿಕೊಂಡು ವಿಭಾಗ

ಮಾಡಿಕೊಂಡಿರುತ್ತೇವೆ. ಉಳಿದ ಆಸ್ತಿಗಳನ್ನು ನಾವು ಅಣ್ಣ-ತಮ್ಮಂದಿರು ಒಪ್ಪಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ಎರಡೂ ವಿಭಾಗಗಳಲ್ಲಿ ದಾವಾ ಆಸ್ತಿ ಸೇರಿಸಿಲ್ಲ ಎಂದರೆ ಸರಿ. ಹುಲ್ಲೆಹಳ್ಳಿ ಗ್ರಾಮದ ಸರ್ವೆ ನಂ.160/4 ರ 1 ಎಕರೆ 14 ಗುಂಟೆ ಜಮೀನನ್ನು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ. ಸದರಿ ಜಮೀನಿನಲ್ಲಿ ಸಮಸ್ಯೆ ಇರುವುದರಿಂದ ನಾವು ಈ ವರೆಗೂ ವಿಭಾಗ ಮಾಡಿಕೊಂಡಿರುವುದಿಲ್ಲ.

ನಿಪಿ5 ನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾವು ಅಣ್ಣ-ತಮ್ಮಂದಿರು ಒಪ್ಪಿ ಮಾಡಿಕೊಂಡ ವಿಭಾಗದಲ್ಲಿ ಅಥವಾ ಜನತಾ ನ್ಯಾಯಾಲಯದಲ್ಲಿ ಮಾಡಿಕೊಂಡ ವಿಭಾಗದಲ್ಲಿ ನನ್ನ ಸಹೋದರಿಯವರು ಪಕ್ಷಗಾರರಲ್ಲ ಎಂದರೆ ಸಾಕ್ಷಿಯು ಅವರ ಒಪ್ಪಿಗೆಯ ಮೇಲೆ ನಾವು ವಿಭಾಗ ಮಾಡಿಕೊಂಡಿರುತ್ತೇವೆ. ಜನತಾ ನ್ಯಾಯಾಲಯದ ಮುಂದೆ ನನ್ನ ಸಹೋದರಿಯರು ಬಂದಿರಲಿಲ್ಲ ಎಂದರೆ ಸರಿ. ನಿಪಿ 5 ವಂಶವೃಕ್ಷದಲ್ಲಿ ನನ್ನ ಸಹೋದರಿಯವರ ಹೆಸರು ನಮೂದು ಇಲ್ಲ ಎಂದರೆ ಸರಿ.

ನನ್ನ ತಂದೆ-ತಾಯಿ ಮರಣ ಪ್ರಮಾಣ ಪತ್ರ ನಿಪಿ 6 ರಿಂದ 8 ನ್ನು ನಾನು ಮತ್ತು ನನ್ನ ಅಣ್ಣ ಇಬ್ಬರು ಸೇರಿ ಪಡೆದುಕೊಂಡಿರುತ್ತೇವೆ. ನಿಪಿ 6 ರಿಂದ 8 ನ್ನು ಯಾವಾಗ ಪಡೆದಿರುತ್ತೀರಿ ಎಂದರೆ ನನ್ನ ತಂದೆ 1989 ರಲ್ಲಿ ಮೃತಪಟ್ಟ ನಂತರ ಅವರ ಮರಣ ಪತ್ರ ಪಡೆದಿರುತ್ತೇವೆ, ತಾಯಿಯು 2018 ರಲ್ಲಿ ಮೃತಪಟ್ಟ ನಂತರ ಅವರ ಮರಣ ಪತ್ರ ಪಡೆದಿರುತ್ತೇವೆ. ನಿಪಿ 6 ನನ್ನ ಅಜ್ಜನ ಮರಣ ಪ್ರಮಾಣ ಪತ್ರ. ಅದನ್ನು ಈ ದಾವೆಗಿಂತ ಪೂರ್ವದಲ್ಲಿ ದಿಃ31.03.2023 ರಂದು ಪಡೆದಿರುತ್ತೇನೆ ಎಂದರೆ ಸರಿ. ನಿಪಿ 6 ನ್ನು ತಲ್ಲೂಕು ಕಛೇರಿಯಲ್ಲಿ ಪಡೆದಿರುತ್ತೇನೆ. ನನ್ನ ಅಜ್ಜ 1982 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ಮೃತಪಟ್ಟ ದಿನಾಂಕ ತಾಲ್ಲೂಕು ಪಂಚಾಯಿತಿಯ ರಿಜಿಸ್ಟರಿನಲ್ಲಿ ನಮೂದು ಇತ್ತು, ನಾವು ಕೇಳಿದಾಗ ಮರಣ ಪ್ರಮಾಣ ಪತ್ರ ನೀಡಿರುತ್ತಾರೆ. ನಿಪಿ 6 ನ್ನು ಮೊದಲು ಯಾವತ್ತಿಗೂ ಪಡೆದಿರಲಿಲ್ಲ.

ನನ್ನ ತಂದೆಗೆ ಬಂದ ಆಸ್ತಿಗಳು ನನ್ನ ಅಜ್ಜನ ಹೆಸರಿನಲ್ಲಿ ಇತ್ತು, ನಂತರ ನನ್ನ ತಂದೆಗೆ ಬಂದಿರುತ್ತದೆ. ನಾನು ಹಾಜರುಪಡಿಸಿರುವ ನಿಪಿ 6 ರಿಂದ 8 ರಲ್ಲಿ ಒಂದು ನ್ಯಾಯಾಲಯಕ್ಕೆ ಅರ್ಜಿ ಹಾಕಿ ಪಡೆದಿರುತ್ತೇನೆ. ನಿಪಿ 1 ರಿಂದ 4, 10 ದಾಖಲೆಗಳು ಈ ದಾವೆಗಿಂತ ಪೂರ್ವದಲಿ ಪಡೆದ ದಾಖಲೆಗಳು ಎಂದರೆ ಕೆಲವೊಂದು ದಾವೆ ಹಾಕಿದ

ನಂತರವೂ ಪಡೆದಿರುತ್ತೇನೆ. ನನ್ನ ಅಜ್ಜನಾದ ತಿಮ್ಮ ಬಿನ್ ಹೋಬಳಿ ಎಂದು ಹೇಳಲು ವಂಶವೃಕ್ಷ ಹೊರತು ಪಡಿಸಿ ಬೇರೆ ದಾಖಲೆ ನನ್ನ ಬಳಿ ಇರಲಿಲ್ಲ, ಹಾಗಾಗಿ ನಾನು ಕೊಟ್ಟಿರುವುದಿಲ್ಲ. ನನ್ನ ಅಜ್ಜನ ಹೆಸರಿಗೆ ಹುಲ್ಲಹಳ್ಳಿ ಗ್ರಾಮದ ಸರ್ವೆ ನಂ.48 ರಲ್ಲಿ 7 ಎಕರೆ 15 ಗುಂಟೆ ಈಗಲೂ ಸಹಃ ಇದೆ.

ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಬೇಕು ಎಂದು ಯಾವಾಗ ತಿಳಿಯಿತು ಎಂದರೆ ಸಾಕ್ಷಿಯು ನನ್ನ ಮಕ್ಕಳು 2 ವರ್ಷದ ಹಿಂದೆ ನಮ್ಮ ನಮ್ಮ ಹೆಸರಿಗೆ ಆಸ್ತಿ ಮಾಡಿಕೊಡಿ ಎಂದು ಕೇಳಿದಾಗ ನಾನು ದಾವಾ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತೇನೆ. ನನ್ನ ತಂದೆಯವರಿಗೆ ಓದು-ಬರಹ ಬರದ ಕಾರಣ ಅವರು ಖಾತೆ ಬದಲಾವಣೆ ಮಾಡಿಸಿರುವುದಿಲ್ಲ.

ಈ ದಾವೆಯ ಪ್ರತಿವಾದಿಗಳು ನಮ್ಮ ಊರಿನವರು. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ನಮಗೆ ತೊಂದರೆ ಕೊಟ್ಟಿದ್ದರಿಂದ ನಾನು ಈ ದಾವೆ ಸಲ್ಲಿಸಿರುತ್ತೇನೆ. 8 ಜನ ಪ್ರತಿವಾದಿಗಳು ನಮಗೆ ತೊಂದರೆ ಕೊಟ್ಟಿರುತ್ತಾರೆ. ಪ್ರತಿವಾದಿಗಳು 2023 ರ ಜನವರಿ ನಿಂದ ಏಪ್ರೀಲ್ ತಿಂಗಳವರೆಗೂ ಸತತವಾಗಿ ನಮಗೆ ತೊಂದರೆ ಕೊಡುತ್ತಿದ್ದರು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.